VIJAYAKUMAR KANNUR
Digitally signed by VIJAYAKUMAR KANNUR
Date: 2026.01.08 10:47:27 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 07.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ASY ವಕೀಲರಿಂದ :**

ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಆಗಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ಈ ಕುಟುಂಬದ ಪಾಲು ವಾಟ್ನಿಯ ಪ್ರಕಾರ ಪ್ರತಿವಾದಿ 1 ರವರು ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುವರು ಎಂಬ ಸಂಗತಿಯೂ ಸಹ ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ದಾವಾ ಆಸ್ತಿ ಕ್ರಮ ಸಂಖ್ಯೆ 8 ಮತ್ತು 9 ನ್ನು ಪ್ರತಿವಾದಿ 2 ರವರ ಹೆಸರಿನಲ್ಲಿ ವರ್ಗಾವಣೆ ಮಾಡಿರುವ ಎಂಬ ಸಂಗತಿ ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಾನು ಮತ್ತು ಉಳಿದ ಪ್ರತಿವಾದಿಯರು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿಯ ಮಧ್ಯೆ ಪಾಲು ವಿಭಾಗವಾಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಇರುವುದರ ದುರುಪಯೋಗಪಡಿಸಿಕೊಂಡು ಅವರು ಮಾರಾಟ ಮಾಡುತ್ತಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಿಃ 27.06.2024 ರಂದು ಪಾಲು ನೀಡುವಂತೆ ಪ್ರತಿವಾದಿಯರಿಗೆ ವಿನಂತಿಸಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಷೆಡ್ಯೂಲ್ ಬಿ ಆಸ್ತಿಯಲ್ಲಿ ನನಗೆ ಮತ್ತು ಉಳಿದ ವಾದಿಯರಿಗೆ ಜಂಟಿಯಾಗಿ ¼ ಹಿಸ್ಸೆ ಇರುವುದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಊರ ಹಿರಿಯರಾದ ಮಲ್ಲಪ್ಪ ಸಣ್ಣಟ್ಟಿ, ಭೀಮಪ್ಪ ಉಳ್ಳಾಗಡ್ಡಿ ಇವರನ್ನು ಕರೆದುಕೊಂಡು ಹೋಗಿ ಪಾಲು ನೀಡುವಂತೆ ಪ್ರತಿವಾದಿಯರಿಗೆ ಕೇಳಿಕೊಂಡಿರುವೆವು. ಇವರ ಹೆಸರುಗಳನುನ್ನ

ನನ್ನ ವಾದ ಪತ್ರದಲ್ಲಾಗಲೀ, ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿ ಬರೆಸಿರುವುದಿಲ್ಲ. ನಮಗೂ ಮತ್ತು ವಾದಿಯರ ಮಧ್ಯೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಾಲು ವಾಟ್ನಿಗೆ ಸಂಬಂಧಪಟ್ಟಂತೆ ಯಾವುದೇ ತಕರಾರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ವ್ಯಕ್ತಿಗಳ ಸಮಕ್ಷಮದಲ್ಲಿ ಪ್ರತಿವಾದಿಯರಿಗೆ ದಾವ ಾಆಸ್ತಿಗಳಲ್ಲಿ ಪಾಲು ನೀಡುವಂತೆ ಕೇಳಿಕೊಂಡಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ 2 ಮತ್ತು 3 ರವರು ಸಂರಕ್ಷಣೆಯನ್ನು ಪ್ರತಿವಾದಿ 1 ರವರೇ ಮಾಡುತ್ತಿರುವವರು ಎಂದರೆ ಸರಿಯಲ್ಲ. ನನ್ನ ಮತ್ತು ಉಳಿದ ವಾದಿ 2 ಮತ್ತು 3 ರವರ ಉಪಜೀವನಕ್ಕೆ ಸಂಬಂಧಪಟ್ಟಂತೆ ಖರ್ಚು ವೆಚ್ಚಗಳನ್ನು ಪ್ರತಿವಾದಿ 1 ರವರೇ ನೋಡಿಕೊಂಡು ಹೋಗುತ್ತಿರುವವರು ಎಂದರೆ ಸರಿಯಲ್ಲ.

3. ದಿಃ 25.04.2024 ರಲ್ಲಿ ನನ್ನ ಗಂಡ ಮೃತ ಪಟ್ಟಿರುವನು. ಇತ ಬೆಳಗಲಿ ಗ್ರಾಮದಲ್ಲೇ ವಾಸವಾಗಿದ್ದನು. ನನ್ನ ಗಂಡನ ಜೀವಿತ ಅವಧಿಯಲ್ಲಿ ನಮ್ಮ ಮತ್ತು ಪ್ರತಿವಾದಿಯರ ಮಧ್ಯೆ ಒಳ್ಳೆ ಸಂಬಂಧ ಇತ್ತು ಎಂದರೆ ಸರಿ. ನನ್ನ ಗಂಡ ಪರಮಾನಂದ ಮೃತ ಪಟ್ಟ ನಂತರ ನಮ್ಮ ಮತ್ತು ಪ್ರತಿವಾದಿ 1 ರವರ ಮಧ್ಯೆ ಸಂಬಂಧ ಚೆನ್ನಾಗಿ ಇರುವುದು ಎಂದರೆ ಸರಿಯಲ್ಲ. ಇವತ್ತಿನವರೆಗೂ ನಾನು ಪ್ರತಿವಾದಿ 1 ರವರ ಮನೆ ಬೆಳಗಲಿಯಲ್ಲೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪಾಲಕರ ಮನೆಯಾದ ಬೆಳಗಲಿಯಲ್ಲಿ ವಾಸವಾಗಿರುವೆನು. ವಾದ ಪತ್ರದ ಶಿರೋನಾಮೆಯಲ್ಲಿ ನಾನು ನನ್ನ ಪಾಲಕರ ಮನೆಯ ವಿಳಾಸದ ಬಗ್ಗೆ ನಮೂದು ಮಾಡಿರುವುದಿಲ್ಲ. ಈ ದಾವೆ ದಾಖಲು ಮಾಡಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ, ಆದರೂ ಸಹ ಈ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2026.01.08 10:47:33 +0530